ಎಂ ವಿ ಸಿ ನಂಃ 28/2024 C/w 29/2024
ಪಿ. ಡಬ್ಲ್ಯೂ-1

**(ಇಂದು ದಿನಾಂಕ 11-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್ ಎಸ್ ಜೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ . ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| ಕ್ರ. ಸಂ. | ದಾಖಲೆಗಳ ನಮೂನೆ | ನಿಶಾನೆ |
|---|---|---|
| 1 | ಗಾಯದ ಪ್ರಮಾಣ ಪತ್ರದ ದೃಡೀಕೃತ ಪ್ರತಿ | ನಿಪಿ-10 |

**ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದ**

1 ನೇ ಎದುರುದಾರರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು . ಗೈರು ಹಾಜರು ಇದ್ದಾರೆ , ಕೊರಿಕೆ ಇಲ್ಲ , ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು .

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಎಂ ಪಿ ಟಿ ವಕೀಲರಿಂದ**

ನಾನು ಮೋಟರ ಸೈಕಲ ನಂಃ ಕೆಎ-25/ಎಚ್ ಇ -5179 ಇದರ ಮಾಲೀಕ ಎಂದರೆ ಸರಿ . ಎರಡು ಮೋಟರ ಸೈಕಲಗಳು ರಸ್ತೆಯ ಮಧ್ಯದಲ್ಲಿ ಮುಖಾಮುಖಿಯಾದ ಕಾರಣ ಅಪಘಾತವಾಗಿದೆ ಎಂದರೆ ಸರಿಯಲ್ಲ . ಸದರಿ ದಿನ ಮೋಟರ ಸೈಕಲನ ಹಿಂಬದಿ ಸವಾರನಾಗಿದ್ದೆ ಎಂದರೆ ಸರಿ ಸಾಕ್ಷಿಯು ಅದನ್ನು ನಾನೇ ಚಲಾಯಿಸುತ್ತಿದ್ದೆ ಎಂದು ಹೇಳುತ್ತಾರೆ . ಸ ದರಿ ಮೋಟ ರ ಸೈಕಲನ್ನು 16 ವರ್ಷದ ಅಪ್ರಾಪ್ತ ಬಾಲಕ ಪ್ರವೀಣ ಪ್ರಕಾಶ ಕಲ್ಲವಡ್ಡರ ಚಲಾಯಿಸುತ್ತಿದ್ದು ನಾನು ಅದರ ಹಿಂಬದಿ ಸವಾರನಾಗಿದ್ದು ಆದರೆ ಅದನ್ನು ನಾನೇ ಚಲಾಯಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಎಂ ವಿ ಸಿ ನಂಃ 28/2024 C/w 29/2024
ಪಿ. ಡಬ್ಲ್ಯೂ-1

ಚಾಲನಾ ಪರವಾನಿಗೆ ಇಲ್ಲದ ವ್ಯಕ್ತಿಗೆ ನಾನು ವಾಹನ ಚಾಲನೆ ಮಾಡಲು ಕೊಟ್ಟೀ ಎನ್ನುವ ಕಾರಣಕ್ಕಾಗಿ ಪೊಲಿಸರು ನನ್ನ ವಿರುದ್ದ ಆರೋಪ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ . ಅಪಘಾತವು ಚಾಲನಾ ಪರವಾನಿಗೆ ಹೊಂದದ ಅಪ್ರಾಪ್ತ ಬಾಲಕನಿಗೆ ವಾಹನ ಚಾಲನೆ ಮಾಡಲು ಕೊಟ್ಟು ಮೋಟರ ಸೈಕಲ ನಂಃ ಕೆಎ-25/ ಎಚ್ ಎಪ್ -5928 ಮೋಟರ ಸೈಕಲ ಸವಾರನ ವಿರುದ್ದ ಸುಳ್ಳು ದೂರು ದಾಖಲಿಸಿದ್ದೆನೆ ಎಂದರೆ ಸರಿಯಲ್ಲ .

ನಾನು ವೈದ್ಯಕೀಯ ವೆಚ್ಚ ರೂ. 20,000/- ಭರಿಸಿದ್ದೆನೆ ಎಂದು ತೊರಿಸುವ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ನನ್ನ ಉದ್ಯೋಗ ಮತ್ತು ಆದಾಯ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ನನಗಾಗಿರುವ ಗಾಯಗಳಿಂದ ನಾನು ಸಂಪೂರ್ಣವಾಗಿ ಗುಣಮುಖವಾಗಿದ್ದು ನಾನು ಯಾವುದೇ ರೀತಿಯ ಅಂಗನೂನ್ಯತೆಯಿಂದ ಬಳಲುತ್ತಿಲ್ಲ ಎಂದರೆ ಸರಿಯಲ್ಲ . ಕೆಎ-25/ಎಚ್ ಎಪ್ -2958 ಮೋಟರ ಸೈಕಲ ಸವಾರನು ವಾಹನ ಚಾಲನಾ ಪರವಾನಿಗೆ ಪತ್ರ ಇಲ್ಲದೇ ಅಪಘಾತದ ಸಮಯದಲ್ಲಿ ವಾಹನ ಚಲಾಯಿಸಿದ ಕಾರಣ ವಿಮಾ ಷರತ್ತು ಉಲ್ಲಂಘಣೆಯಾಗಿದ್ದು ಅದಕ್ಕೆ ಪೂರಕವಾಗಿ ನಾನು 2 ನೇ ಎದುರುದಾರನ ವಿರುದ್ದ ಪರಿಹಾರ ಕೇಳಲು ಭಾದ್ಯಸ್ತನಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.